ಮಾತ್ರ ಪಡೆದುಕೊಳ್ಳಲಾಗುವುದಿಲ್ಲ ಎಂದು ವಿವೇಕಾನಂದರು ಉಪದೇಶಿಸಿದ್ದಾರೆ.

ನಾನಕರ ವಿಷಯದಲ್ಲಾಗಲಿ ಸಿಖ್‌ಪಂಥದ ವಿಷಯದಲ್ಲಾಗಲಿ ವಿವೇಕಾನಂದರು ಸದ್ಭಾವನೆಗಳನ್ನು ಪ್ರಕಟಿಸಿದ್ದಾರೆ. ''ನಾನಕರಿಗೆ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಯೋಗ್ಯನಾದ ಶಿಷ್ಯನಿಗೆ ಧಾರೆಯೆರೆಯುವ ಸಾಮರ್ಥ್ಯವಿತ್ತು. ಅದಕ್ಕಾಗಿ ಅವರು ತಮ್ಮ ಮನೆಮಠ, ಹೆಂಡತಿಮಕ್ಕಳು ಎಲ್ಲವನ್ನೂ ಮರೆತು ಶಕ್ತಿಯನ್ನು ಸ್ವೀಕರಿಸಲು ತಕ್ಕವನಿಗಾಗಿ ಕಾಯುತ್ತಿದ್ದರು. ಅದು ನೆರವೇರಿದೊಡನೆಯೆ ನೆಮ್ಮದಿಯಿಂದ ಸಾಯಲು ಸಿದ್ಧರಾದರು'' ಎಂದು ಬರೆದಿದ್ದಾರೆ. ಹೀಗೆ ಶಕ್ತಿಯನ್ನು ಧಾರೆಯೆರೆಯುವ ವಿಚಾರಕ್ಕೆ ವೇದಾಂತಶಾಸ್ತ್ರದಲ್ಲಿ 'ಶಕ್ತಿಪಾತ' ಎಂದು ಹೆಸರು. ಇಂತಹ ಶಕ್ತಿಪಾತ ಪರಮಹಂಸರಿಂದ ವಿವೇಕಾನಂದರಿಗೂ ಆಗಿತ್ತು. ಗುರುನಾನಕರೆಂದರೆ ಪರಮಹಂಸರಿಗೂ ಅಚ್ಚುಮೆಚ್ಚು. ಕೋಯರ್‌ಸಿಂಗ್ ಎಂಬಾತನು ಪರಮಹಂಸರಲ್ಲೇ ಗುರುನಾನಕರನ್ನು ಕಂಡುಕೊಂಡಿದ್ದನು. 'ಸಮಾಧಿಸ್ಥಿತಿಯನ್ನು ಪಡೆದುಕೊಂಡ ಮೇಲೂ ಲೋಕಕಲ್ಯಾಣಕ್ಕಾಗಿ ಜಗತ್ತಿಗೆ ಮರಳಿ ಬಂದವರನ್ನು ನಾನು ಕಂಡಿಲ್ಲ. ನೀವು ಗುರುನಾನಕರೇ ಆಗಿರಬೇಕು' ಎಂದು ಆತನು ಹೇಳುತ್ತಿದ್ದನು. ಪರಮಹಂಸರು ಅದನ್ನು ಮೌನವಾಗಿ ಸ್ವೀಕರಿಸುತ್ತಿದ್ದರು. ತಮ್ಮ ಬಳಿಗೆ ಬಂದಿದ್ದ ನಿರಾಕಾರವಾದಿಯಾದ ನಾನಕಪಂಥದ ಸಾಧುವಿಗೆ ''ಭಗವಂತ ನಿರಾಕಾರನೆಂಬುದೇನೋ ನಿಶ್ಚಿತ, ಆದರೆ ಅವನು ಸಾಕಾರನೂ ಹೌದು. ಸಾಕಾರದ ಮೇಲೆ ಧ್ಯಾನಮಾಡಿದರೆ ಬೇಗ ಭಕ್ತಿಯುಂಟಾಗುತ್ತದೆ'' ಎಂದು ಬೋಧಿಸಿದ್ದರು. ಕಾಶಿಯ ನಾನಕ್ ಪಂಥದ ಸಾಧುವೊಬ್ಬನು ಪರಮಹಂಸರನ್ನು 'ಪ್ರೇಮಿಸಾಧು' ಎಂದು ಮೆಚ್ಚಿಕೊಂಡು, ತಮ್ಮ ಮಠಕ್ಕೆ ಒಮ್ಮೆ ಕರೆದುಕೊಂಡು ಹೋಗಿದ್ದನು. ಅಲ್ಲಿನ ಮಹಾಂತನಾದರೋ ಸಗುಣೋಪಾಸಕನಾಗಿದ್ದನು. ''ಕಲಿಯುಗಕ್ಕೆ ನಾರದೀಯ ಭಕ್ತಿಯೇ ಶ್ರೇಷ್ಠ; ಜಲದಲ್ಲಿ ವಿಷ್ಣು, ಸ್ಥಳದಲ್ಲಿ ವಿಷ್ಣು, ಪರ್ವತದ ತುದಿಯಲ್ಲಿ ವಿಷ್ಣು, ಈ ಜಗತ್ತೆಲ್ಲವೂ ವಿಷ್ಣುಮಯ'' ಎಂದು ಅವನು ಹೇಳಿದುದನ್ನು ಪರಮಹಂಸರು ಸಂತೋಷಪಟ್ಟು ಸ್ವೀಕರಿಸಿದರು. ✷

## ಸ್ವಾಮಿ ಶಿವಾನಂದರ ಉಪದೇಶಗಳು



ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಿವಾನಂದರು (೧೮೫೪–೧೯೩೪) 'ರಾಮಕೃಷ್ಣ ಮಹಾಸಂಘದ ಎರಡನೇ ಪರಮಾಧ್ಯಕ್ಷರಾಗಿದ್ದರು. ತಮ್ಮ ಜೀವನವನ್ನೆಲ್ಲ ಕಠಿಣ ಸಾಧನೆ, ತಪಸ್ಸುಗಳಲ್ಲಿ ಕಳೆದ ಅವರು ಅನೇಕ ಮಂದಿ ಸಾಧಕರ ಪಾಲಿಗೆ ಸ್ಫೂರ್ತಿಯ ಸೆಲೆಯಾಗಿದ್ದರು.ಡಿಸೆಂಬರ್ ೧೮ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಉಪದೇಶಗಳನ್ನಿಲ್ಲಿ ನೀಡುತ್ತಿದ್ದೇವೆ.

✷ ಯಾರಲ್ಲಿ ಅಕುಟಿಲವಾದ ತ್ಯಾಗ-ವೈರಾಗ್ಯಗಳಿರುವವೋ ಅವರಿಗೆ ಯಾವ ಕಾಲದಲ್ಲಿಯೂ ಭಯವಿಲ್ಲ. ಭಗವಂತನು ಅವರ ಹೃದಯದಲ್ಲಿ ಪ್ರಕಟವಾಗುತ್ತಾನೆ. ತನ್ನ ದರ್ಶನವಿತ್ತು ಅವರ ಜೀವನವನ್ನು ಧನ್ಯವನ್ನಾಗಿ ಮಾಡುತ್ತಾನೆ. ನಿಜವಾಗಿ ಇರಬೇಕಾದದ್ದು ಎಂದರೆ ತ್ಯಾಗ, ವೈರಾಗ್ಯ, ಪವಿತ್ರತೆ ಮತ್ತು ಭಗವತ್‌ಸಾಕ್ಷಾತ್ಕಾರಕ್ಕಾಗಿ ಆಂತರಿಕ ಆಕಾಂಕ್ಷೆ.

✷ ಆಸೆಯಿಂದ ದುಃಖವುಂಟಾಗುವುದು. ಆಸೆಯಿಲ್ಲದಿರುವುದೇ ಆನಂದ. ಸುಖಭೋಗದ ಆಸೆಯನ್ನಂತೂ ತ್ಯಜಿಸಲೇಬೇಕು. ಆದರೆ ಎಲ್ಲ ಆಸೆಗಳನ್ನೂ ತ್ಯಜಿಸಬೇಕಿಲ್ಲ. ಪ್ರಾಪಂಚಿಕ ಆಸೆಗಳನ್ನು ಮಾತ್ರ ತ್ಯಜಿಸಬೇಕು; ಭಗವಂತನ ಸಾಕ್ಷಾತ್ಕಾರ ಪಡೆಯುವ, ಜ್ಞಾನ-ಭಕ್ತಿಗಳನ್ನು ಪಡೆಯುವ ಆಸೆಯನ್ನು ತ್ಯಜಿಸಬಾರದು.

✷ ನಮ್ಮ ತಾಯಿಯ ಹೆಸರು ಶಾರದಾ. ಈ ತಾಯಿಯೇ ಸ್ವಯಂ ಸರಸ್ವತೀ. ಆಕೆಯೇ ಕೃಪೆದೋರಿ ಜ್ಞಾನ ಕೊಡುವವಳು; ಜ್ಞಾನ ಎಂದರೆ ಭಗವಂತನ ಅರಿವು. ಈ ಜ್ಞಾನ ಉಂಟಾದಾಗಲೆ ಸರಿಯಾದ ಭಕ್ತಿ ಉಂಟಾಗುವ ಸಂಭವ, ಜ್ಞಾನ ಉಂಟಾಗದಿದ್ದರೆ ಭಕ್ತಿ ಉಂಟಾಗುವುದಿಲ್ಲ. ಶುದ್ಧ ಜ್ಞಾನವೂ ಶುದ್ಧಭಕ್ತಿಯೂ ಎರಡೂ ಒಂದೇ ವಸ್ತು. ತಾಯಿಯ ಕೃಪೆಯಿದ್ದರೇ ಅದೆಲ್ಲ ಉಂಟಾಗುವ ಸಂಭವ. ಜ್ಞಾನ ಕೊಡುವ ದಾತೃವೂ ತಾಯಿಯೇ.

✷ ನಿರಂತರವಾಗಿ ಆತನ ಧ್ಯಾನ ಮಾಡುತ್ತಾ ಮಾಡುತ್ತಾ ಆತನೆ ಕೃಪೆ ಮಾಡಿ ಭಕ್ತನ ಹೃದಯದಲ್ಲಿ ಮೈದೋರುತ್ತಾನೆ. ಬೇಕಾದುದು ಆತನ ಧ್ಯಾನ – ಸರ್ವದಾ ಆತನ ಸ್ಮರಣ ಮನನ. ಸತ್ಯಸ್ವರೂಪ, ವಿಭು, ಪ್ರೇಮಮಯ, ಸರ್ವ ಶಕ್ತಿಮಾನ್, ಚೈತನ್ಯಸ್ವರೂಪ ಸಚ್ಚಿದಾನಂದನನ್ನು ಭಾವಿಸುತ್ತಾ ಭಾವಿಸುತ್ತಾ ಮನುಷ್ಯನಿಗೆ ಕ್ರಮೇಣ ಸಚ್ಚಿದಾನಂದನ ಸ್ವರೂಪ ಪ್ರಾಪ್ತವಾಗುತ್ತದೆ.


✷ ಗುರುವಾಕ್ಯದಲ್ಲಿ ವಿಶ್ವಾಸ – ಬಾಲಕನಂತೆ ವಿಶ್ವಾಸವಿರಬೇಕು.




# ಗುರು ಮಹಿಮೆ

**ಕಥೆ: ಟಿ.ಎಂ.ಸುಂದರರಾಮನ್** **ಕಲೆ: ಶಂಕರ್**


**1** ನಾಮದೇವ ವಿಠಲನ ದೊಡ್ಡ ಭಕ್ತನಾಗಿದ್ದ. ಅವನು ವಿಠಲನೊಂದಿನಗೆ ನೇರ ಮಾತುಕತೆ ನಡೆಸುತ್ತಿದ್ದ.





**2** ಗೋರ ಕುಂಬಾರನೆಂಬ ಒಬ್ಬ ಸಂತ ದೇವಾಲಯವೊಂದರಲ್ಲಿ ಸಾಧುಸಂತರ ಸಭೆ ನಡೆಸುತ್ತಿದ್ದ. ನಾಮದೇವನೂ ಅಲ್ಲಿಗೆ ಹೋದ.




**3** ಸಂತ ಗೋರ ಕುಂಬಾರ ಎಲ್ಲರ ತಲೆಯ ಮೇಲೆ ಒಂದು ಕಡ್ಡಿಯಿಂದ ಬಡಿಯುತ್ತ ಬಂದ.




ಅದೇ ರೀತಿ ಅವನು ನಾಲ್ಕೈದು ಜನರ ತಲೆಗೆ ಬಡಿದ.





ಹೀಗೆ ಯೋಚಿಸುತ್ತಾ ನಾಮದೇವ ಅಲ್ಲಿಂದ ಹೊರಟುಹೋದ. ಅವನು ಪಕ್ವನಾಗಿಲ್ಲವೆಂದು ಉಳಿದ ಸಾಧುಗಳು ನಕ್ಕರು.









**7** ಒಂದು ದಿನ ನಾಮದೇವ ದೇವಸ್ಥಾನಕ್ಕೆ ಹೋಗುತ್ತಿದ್ದ. ದಾರಿಯಲ್ಲಿ ಒಬ್ಬ ಮಾಂಸ ಬೇಯಿಸುತ್ತಿದ್ದ.




**8** ನಾಮದೇವನು ಅಸಹ್ಯಪಟ್ಟುಕೊಂಡು, ಅವನಿಂದ ದೂರದಲ್ಲೇ ನಡೆಯುತ್ತ ದೇವಸ್ಥಾನಕ್ಕೆ ಹೋದ. ದೇವಾಲಯದಲ್ಲಿ..



**9** ಒಂದು ದಿನ ನಾಮದೇವ ಒಂದೆಡೆ ಪೂಜೆ ಮಾಡುತ್ತಿದ್ದ. ಆಗ ಅಲ್ಲಿಗೊಬ್ಬ ಮ್ಲೇಚ್ಛ ಸರದಾರ ಕುದುರೆ ಸವಾರಿ ಮಾಡುತ್ತ ವೇಗವಾಗಿ ಬಂದ. ನಾಮದೇವ ಪೂಜೆ ಮಾಡುತ್ತಿದ್ದ ವಸ್ತುಗಳನ್ನೆಲ್ಲ ಅವನು ಚೆಲ್ಲಾಪಿಲ್ಲಿ ಮಾಡಿ ಹೋದ.




**11** ನಾಮದೇವ ವಿಸೋಬ ಖೇಚರನ ಬಳಿಗೆ ಹೋದ. ಅವನು ಚಪ್ಪಲಿಗಳೊಂದಿಗೆ ಶಿವಲಿಂಗದ ಮೇಲೆ ಕಾಲಿಟ್ಟು ಮಲಗಿ ವಿಶ್ರಾಂತಿ ಪಡೆಯುತ್ತಿದ್ದ.




**12** ನಾಮದೇವ ವಿಸೋಬ ಖೇಚರನ ಕಾಲುಗಳನ್ನು ಅಲ್ಲಿಂದ ಸರಿಸಿ ಇನ್ನೊಂದೆಡೆ ಇಟ್ಟ. ಆಶ್ಚರ್ಯ, ಅವನ ಕಾಲುಗಳನ್ನು ಎಲ್ಲೆಲ್ಲಿ ಇಟ್ಟರೂ ಅವನ ಕಾಲಕೆಳಗೆ ಶಿವಲಿಂಗ ಕಾಣಿಸಿಕೊಳ್ಳುತ್ತಿತ್ತು! ಆಗ ನಾಮದೇವನಿಗೆ ವಿಸೋಬ ಖೇಚರನ ಮಹಿಮೆ ಅರ್ಥವಾಯಿತು.

